# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೫೮೬
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧–೨೨ ದಿನಾಂಕ : ೩೧–೦೧–೨೦೨೨



ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.......................................ಬೆಂಗಳೂರು

ಮಾನ್ಯರೆ,

**ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## ಬೆಂಗಳೂರಿನ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ

## ಡಾ. ಜೋಸೆಫ್ ವಿ.ಜಿ. ಅವರಿಗೆ

# ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ದಿನಾಂಕ ೧೯–೦೧–೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **೨೦೨೨ನೆಯ ಸಾಲಿನ "ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ**"ಗೆ ಬೆಂಗಳೂರಿನ ಗಾರ್ಡ್‌ನ್ ಸಿಟಿ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ **ಡಾ. ಜೋಸೆಫ್ ವಿ.ಜಿ.** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೨೫,೦೦೦ (ಇಪ್ಪತ್ತೈದು ಸಾವಿರ ಮಾತ್ರ)** ನಗದು. ಇದರ ಜೊತೆಗೆ ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನೂ ಒಳಗೊಂಡಿರುತ್ತದೆ.

**ಶ್ರೀಯುತ ಡಾ. ಜೋಸೆಫ್ ವಿ.ಜಿ. ಅವರು** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು, ಮಾಂಡವ್ಯ ಋಷಿ ತಪಸ್ಸು ಮಾಡಿದ ಮಂಡಗದ್ದೆಯಿಂದ, ಮಲೆನಾಡಿನ ಅಪ್ಪಟ ಮಗನಾಗಿ ಮಹಾನ್ ಬಸವಣ್ಣನವರ ಆದರ್ಶವನ್ನು ಮೈಗೂಡಿಸಿಕೊಂಡು ಪ್ರಸ್ತುತ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ **ಕುಲಾಧಿಪತಿಗಳಾಗಿ,** ಕನ್ನಡದ ಕಂಪನ್ನು ಆಸ್ವಾದಿಸುತ್ತ ಕನ್ನಡದ ಬಗ್ಗೆ ತಮಗಿರುವ ಅಪಾರವಾದ ಒಲವನ್ನು ತಮ್ಮೆಲ್ಲ ಕೆಲಸಕಾರ್ಯಗಳಲ್ಲಿ ಹೆಮ್ಮೆಯಿಂದ ಅಳವಡಿಸಿಕೊಂಡು; ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ **ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ** ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಕನ್ನಡವನ್ನೇ ಬಳಸುವುದರ ಮೂಲಕ ಕನ್ನಡದ ಬಗ್ಗೆ ತಮಗಿರುವ ಅಪಾರ ಕಾಳಜಿಯನ್ನು ಶ್ರೀಯುತರು ತೋರಿಸಿಕೊಂಡಿದ್ದಾರೆ.

ಪುಟ...೨ಕ್ಕೆ

ತಮ್ಮ ದೂರದೃಷ್ಟಿಯಿಂದ ಮಹತ್ ಕಾರ್ಯಗಳಲ್ಲಿ ಸದಾ ಮುಂಚೂಣಿಯಲ್ಲಿರುವ ಶ್ರೀಯುತರು ಕನ್ನಡ ಮಾಧ್ಯಮ ಶಾಲೆಗಳನ್ನು ಸ್ಥಾಪಿಸುವಲ್ಲಿ ಅಪಾರವಾದ ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಕಲಿಯಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಕನ್ನಡ ಕಲಿಕೆಯ ಕೋರ್ಸುಗಳನ್ನು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ಪಠ್ಯದಲ್ಲಿ ಕನ್ನಡ ಮಾತ್ರವಲ್ಲದೆ ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಇಲ್ಲಿನ ಸಂಪದ್ಭರಿತ ಸಂಸ್ಕೃತಿಯ ಹಿರಿಮೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ಪಸರಿಸಲಾಗುತ್ತದೆ. ಗಾರ್ಡನ್ ಸಿಟಿ ವಿಶ್ವವಿದ್ಯಾಲಯದಲ್ಲಿ ಆಚರಿಸಲ್ಪಡುವ **ಕನ್ನಡ ಉತ್ಸವ** ಬೆಂಗಳೂರಿನ ಜನರ ಉಸಿರಲ್ಲಿ ಬೆರೆತಿರುವುದು ಇದಕ್ಕೊಂದು ಸಾಕ್ಷಿ. ಇವರು ಪ್ರಾರಂಭಿಸಿದ **ದಿನಕ್ಕೊಂದು ಪದ** ಕನ್ನಡೇತರರಲ್ಲಿ ಕನ್ನಡವನ್ನು ಕಲಿಯುವ ಹಾಗೂ ಮಾತನಾಡುವ ಆಸಕ್ತಿಯನ್ನು ಬೆಳೆಸುವಲ್ಲಿ ಇವರು ಯಶಸ್ವಿಯಾಗಿದ್ದಾರೆ.

**ಶಿಕ್ಷಣ ರತ್ನ, ಪ್ರೈಡ್ ಆಫ್ ಇಂಡಸ್ಟ್ರಿ ಅವಾರ್ಡ್, ಎಜುಕೇಷನ್ ಎವಾಂಜಲಿಸ್ಟ್, ಕರ್ಮವೀರ ಚಕ್ರ** ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. **ಡೊಯೆನ್ ಆಫ್ ಎಜುಕೇಷನ್ ಇನ್ ಕರ್ನಾಟಕ** ಅಂತಹ ಹಲವರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಆಯ್ಕೆ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಇವರನ್ನು ಆಯ್ಕೆ ಮಾಡಲಾಯಿತು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ಶ್ರೀ ಎಂ. ಪ್ರಕಾಶಮೂರ್ತಿ,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ ಶ್ರೀ **ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.



**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

---

ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.